**<u>ಕರ್ನಾಟಕ ವಿಧಾನ ಪರಿಷತ್ತು</u>**

**(153ನೇ ಅಧಿವೇಶನ)**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 119 (92) |
| ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಅರಣ್ಯ ಪ್ರದೇಶದಲ್ಲಿ ವಾಸಿಸುವ ಗಿರಿಜನರ ಮತ್ತು ಪಾರಂಪಾರಿಕ ಅರಣ್ಯ ವಾಸಿಗಳ ಹಾಡಿಗಳಲ್ಲಿ ಅವರ ಮನೆಗಳ ಹತ್ತಿರವಿರುವ ಅಥವಾ ಹಾಡಿಗಳಲ್ಲಿರುವ ಒಣಗಿದ ಅಪಾಯಕಾರಿ ಮರಗಳನ್ನು ತೆರವುಗೊಳಿಸಲು ಇರುವ ಮಾನದಂಡಗಳು ಯಾವುದು; | ಅರಣ್ಯ ಪ್ರದೇಶದಲ್ಲಿ ವಾಸಿಸುವ ಗಿರಿಜನರ ಮತ್ತು ಪಾರಂಪಾರಿಕ ಅರಣ್ಯವಾಸಿಗಳ ಹಾಡಿಗಳಲ್ಲಿ ಅವರ ಮನೆಗಳ ಹತ್ತಿರವರುವ ಅಥವಾ ಹಾಡಿಗಳಲ್ಲಿರುವ ಒಣಗಿದ ಅಪಾಯಕಾರಿ ಮರಗಳನ್ನು ತೆರವುಗೊಳಿಸಲು ಯಾವುದೇ ಪ್ರತ್ಯೇಕಮಾನದಂಡಗಳು ಇರುವುದಿಲ್ಲ. ಆದರೆ, ಕಾರ್ಯ ಯೋಜನೆಯಲ್ಲಿ ಸತ್ತ ಮತ್ತು ಬಿದ್ದ ಮರಗಳನ್ನು ನಿಯಮಿತಿ ಮಧ್ಯಂತರದಲ್ಲಿ ತೆರವು ಮಾಡಲಾಗುತ್ತಿದೆ. |
| ಆ) | ಹಾಡಿಗಳಲ್ಲಿರುವ ಅಪಾಯಕಾರಿ ಒಣಗಿದ ಮರಗಳಿಂದ ಮನೆಗಳಿಗೆ ಹಾನಿ, ಹಾಡಿಯ ಜನ ಅಥವಾ ಸಾಕು ಪ್ರಾಣಿಗಳಿಗೆ ಜೀವ ಹಾನಿಯಾದರೆ ಅರಣ್ಯ ಇಲಾಖೆ ಪರಿಹಾರ ನೀಡುವುದೇ; | ಇದುವರೆಗೆ ಇಂತಹ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ. |
| ಇ) | ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ನಾಗರಗಾಳಿ ವಲಯ ಅರಣ್ಯ ಪ್ರದೇಶದಲ್ಲಿ ಬರುವ ನಾನಾಕೆಸರೋಡಗಾ ಗ್ರಾಮದ ಜನರು ಅನೇಕ ಬಾರಿ ತಮ್ಮ ಹಾಡಿಯಲ್ಲಿರುವ ಅಪಾಯಕಾರಿ ಮರಗಳ ತೆರವುಗೊಳಿಸುವ ಕುರಿತು ವಲಯ ಅರಣ್ಯ ಅಧಿಕಾರಿಗಳಿಗೆ ಖುದ್ದು ಭೇಟಿ ಮಾಡಿ ಅರ್ಜಿಗಳನ್ನು ನೀಡಿದರೂ, ಕಳೆದ 2 ವರ್ಷಗಳಿಂದ ಅಪಾಯಕಾರಿ ಮರಗಳ ತೆರವುಗೊಳಿಸುವಿಕೆ ಕಾರ್ಯಕ್ಕೆ ಹಿಂದೇಟು ಹಾಕುತ್ತಿರುವುದಕ್ಕೆ ಕಾರಣಗಳೇನು? (ಈ ಕುರಿತು ಸರ್ಕಾರದ ಕ್ರಮಗಳ ಬಗೆಗಿನ ಮಾಹಿತ ನೀಡುವುದು) | ಬೆಳಗಾವಿ ವಿಭಾಗದ ನಾಗರಗಾಳಿ ವಲಯ ವ್ಯಾಪ್ತಿಯಲ್ಲಿ ಬರುವ ನಾನಾಕೆಸರೋಡಗಾ ಗ್ರಾಮದ ಜನರು ತಮ್ಮ ಹಾಡಿಯಲ್ಲಿರುವ ಅಪಾಯಕಾರಿ ಮರಗಳನ್ನು ತೆರವುಗೊಳಿಸುವ ಕುರಿತು ಅರ್ಜಿ ಸಲ್ಲಿಸಿದ್ದು, ಸದರಿ ಮರಗಳು ಮಾನವನ ಪ್ರಾಣ ಹಾನಿಗೆ ಅಂತಕಕಾರಿಯಾಗಿರುವುದರಿಂದ ಮರ ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ. |

ಸಂಖ್ಯೆ: ಅಪಜೀ 82 ಎಫ್‌ಎಫ್ 2024

(ಈಶ್ವರ ಬಿ. ಖಂಡ್ರೆ)

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.